<u>ಸಾಕ್ಷಿಯನ್ನು ದಿಃ**20.01.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ.ವೈ.ಆರ್.ಹೆಚ್. ವಕೀಲರಿಂದ:</u>

ನನ್ನ ತಂದೆ ಕ್ರಯಕ್ಕೆ ಪಡೆದಿದ್ದ ದಾಖಲಾತಿಯನ್ನು ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನನ್ನ ತಂದೆ ಆದಾಯ ತೆರಿಗೆ ಮಾಡಿದ ದಾಖಲಾತಿಯ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಲಕ್ಷ್ಮಮ್ಮ, ಅವರ ಗಂಡ ಮತ್ತು ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಅವರ ಕುಟುಂಬದಲ್ಲಿ ಈವರೆಗೂ ಯಾವುದೇ ವಿಭಾಗವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ.1 ಆಗಿದೆ ಎಂದು ಹೇಳುವ ಕಾಲಕ್ಕೆ ಅವರ ಕುಟುಂಬದಲ್ಲಿ ವಿಭಾಗ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ನಮ್ಮ ಕುಟುಂಬದವರು ಎಂಬ ಪದವನ್ನು ನಮೂದು ಮಾಡಿರುತ್ತಾರೆ. ನಾನು ಹಾಜರುಪಡಿಸಿರುವ ನಿಪಿ.1 ರಲ್ಲಿ ನಮೂದಿಸಿರುವ ಸರ್ವೇ ನಂಬರ್ ಈಗಲೂ ಚಾಲ್ತಿಯಲ್ಲಿರುತ್ತದೆ.

ನನ್ನ ತಂದೆ ಪ್ರತಿವಾದಿರವರಿಗೆ ನೋಟಿಸ್ ನೀಡುವ ಕಾಲಕ್ಕೆ ನಾನು ಹಾಜರಿರಲಿಲ್ಲ. ಸದರಿ ನೋಟಿಸ್ ನಲ್ಲಿ ನನ್ನ ತಂದೆ ಸಹಿ ಮಾಡಿರುತ್ತಾರೆ. ನಿಪಿ.1 ಆಗಿದೆ ಎಂದು ಹೇಳುವ ದಿನಾಂಕದಿಂದ ನಿಪಿ.2 ರ ನೋಟಿಸ್ ದಿನಾಂಕದ ಮಧ್ಯದಲ್ಲಿ ಬೇರೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ.1 ಆಗಿದೆ ಎಂದು ಹೇಳುವ ದಿನಾಂಕದ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಣಕಾಸಿನ ವ್ಯವಹಾರ ನಡೆದಿರುತ್ತದೆ. ಯಾವ

ದಿನಾಂಕದಂದು ಮತ್ತು ಎಷ್ಟು ಹಣದ ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ರಲ್ಲಿ ಸದರಿ ಹಣದ ವ್ಯವಹಾರದ ಬಗ್ಗೆ ನಮೂದಾಗಿರುತ್ತದೆ.

ದಾವಾ ಆಸ್ತಿ ಸರ್ವೇ ನಂಬರ್ 2008 ರಲ್ಲಿ ದುರಸ್ತು ಆಗಿರುತ್ತದೆ. ದುರಸ್ತು ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಅದನ್ನು ಹಾಜರುಪಡಿಸಲು ತೋಂದರೆ ಇದೆಯೇ ಎಂದರೆ ನಾನು ನೋಡಬೇಕು ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ಪಹಣಿ ಆಧಾರದಲ್ಲಿ ಚೆಕ್ಕು ಬಂದಿಯನ್ನು ನಮೂದಿಸಲಾಗಿದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿಯನ್ನು ನಾನು ನೋಡಿರುತ್ತೇನೆ. ಅದರಲ್ಲಿ ನಮೂದಿಸಿರುವ ಚೆಕ್ಕು ಬಂದಿಯೇ ನಿಪಿ.1 ರಲ್ಲಿ ನಮೂದಾಗಿರುತ್ತದೆ. ನಾನು ಈವರೆಗೂ ಸಾಗುವಳಿ ಚೀಟಿಯನ್ನು ನೋಡಿರುವುದಿಲ್ಲ ಮತ್ತು ಅದರಲ್ಲಿ ನಮೂದಿಸಿರುವ ಚೆಕ್ಕು ಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ 14 ವರ್ಷ ಪರಬಾರೆ ಅವಧಿ ಎಂದು ನಮೂದು ಮಾಡಲಾಗಿರುತ್ತದೆ. ನಿಪಿ.1 ರಲ್ಲಿ ಸಾಗುವಳಿ ಚೀಟಿಯ ಪ್ರಕಾರ ಯಾವ ವರ್ಷಕ್ಕೆ ಪರಬಾರೆ ಅವಧಿ ಮುಗಿಯುತ್ತದೆ ಮತ್ತು ಯಾವ ವರ್ಷಕ್ಕೆ ನೊಂದಣಿ ಮಾಡಿಕೊಳ್ಳಬೇಕು ಎಂದು ಬರೆದಿರುತ್ತದೆ. ಸಾಗುವಳಿ ಚೀಟಿಯನ್ನು ದಿನಾಂಕಃ06.06.2002 ರಲ್ಲಿ ನೀಡಿರುತ್ತಾರೆ. ನಮ್ಮ ನೋಟಿಸ್‌ನಲ್ಲಾಗಲೀ ಅಥವಾ ವಾದಪತ್ರದಲ್ಲಾಗಲೀ ಪರಬಾರೆ ಅವಧಿ ಮುಗಿಯುವ ದಿನಾಂಕ ಅಥವಾ ನೊಂದಣಿ ಮಾಡಿಕೊಳ್ಳುವ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ

ಪತ್ರದಲ್ಲಿ ಸಹ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಾಗುವಳಿ ಚೀಟಿ ನೋಡದೆ ಇರುವುದರಿಂದ ಸಾಗುವಳಿ ಚೀಟಿ ದಿನಾಂಕ ಅಥವಾ ಪರಬಾರೆ ದಿನಾಂಕವನ್ನು ನೋಟಿಸ್‌ನಲ್ಲಾಗಲೀ, ವಾದಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ . ಪಹಣಿಯಲ್ಲಿ ನಮೂದಾಗಿರುವ ಆಧಾರದ ಮೇಲೆ ಸಾಗುವಳಿ ಚೀಟಿ ದಿನಾಂಕವನ್ನು ನಮೂದಿಸಿ ನಿಪಿ.1 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಪರಬಾರೆ ಮುಗಿಯುವ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.1 ನ್ನು 2020 ರಲ್ಲಿ ಸೃಷ್ಟಿ ಮಾಡಿದ್ದರಿಂದ ಅದಕ್ಕೂ ಪೂರ್ವದಲ್ಲಿ ಪ್ರತಿವಾದಿರವರಿಗೆ ನಾವು ಯಾವುದೇ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲೂ ಸಹ ನನ್ನ ತಂದೆಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಮೂದಿಸಿರುವ ಸಹಿ ಸಹ ನನ್ನ ತಂದೆಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಪಿ.1 ನ್ನು ಸೃಷ್ಟಿ ಮಾಡಿರುವುದರಿಂದ ಬದುಕಿರುವವರ ಹೆಸರಿನಲ್ಲಿ ದಾಖಲಾತಿ ಮಾಡಿದರೆ ಕ್ರಿಮಿನಲ್ ಪ್ರಕರಣದಲ್ಲಿ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಮರಣ ಹೊಂದಿದ ನಮ್ಮ ತಂದೆಯ ಹೆಸರಿನಲ್ಲಿ ದಾಖಲಾತಿ ಸೃಷ್ಟಿಸಿ ಅವರ ಸಹಿಯನ್ನು ನಕಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ.1 ರಲ್ಲಿ ಕೆಂಪಣ್ಣ ಎಂಬುವವರ ಸಹಿಯನ್ನು ಮತ್ತು ನನ್ನ ತಂದೆ ಕ್ರಯಕ್ಕೆ ಪಡೆದಿರುವ ದಾಖಲಾತಿ ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನನಗೆ

ತಕರಾರು ಇರುವುದಿಲ್ಲ. ಅವರ ಸಹಿ ಇರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ಮೋಸ ಮಾಡಿರುವುದು ಗೊತ್ತಾಗುತ್ತದೆ ಎಂದು ಅವರ ಸಹಿ ಇಲ್ಲದ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟಿಸ್ ನೀಡಿರುವ ದಿನಾಂಕಕ್ಕೆ ನಿಪಿ.1 ದಾಖಲಾತಿ ಅಸ್ತಿತ್ವದಲ್ಲೇ ಇರದ ಕಾರಣ ನೋಟಿಸ್‌ನ ಜೊತೆ ಸದರಿ ದಾಖಲಾತಿಯನ್ನು ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಪಿ.2 ನೋಟಿಸ್ ಗೆ ಯಾವುದೇ ದಾಖಲಾತಿ ಮಾಡಿಕೊಟ್ಟಿರುವುದಿಲ್ಲ ಮತ್ತು ಸದರಿ ದಾಖಲಾತಿಯನ್ನು ನೋಟಿಸ್ ಜೊತೆ ಕಳುಹಿಸಿಕೊಟ್ಟಿಲ್ಲ ಎಂದು ಉತ್ತರ ನೋಟಿಸ್ ನ್ನು ನೀಡಿರುತ್ತಾರೆ ಎಂದರೆ ಸರಿ.

ನಿಪಿ.1 ರಲ್ಲಿ 1 ನೇ ಪ್ರತಿವಾದಿ, ಧನಂಜಯ, ರಾಮಣ್ಣ ಮತ್ತು ಕೆ.ವಿ.ನಾಗರಾಜು ಹಾಗೂ ನನ್ನ ತಂದೆ ಕೆಂಪಣ್ಣರವರ ಸಹಿಗಳನ್ನು ನಕಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ಆಗಿದೆ ಎಂದು ಹೇಳುವ ದಿನಾಂಕಕ್ಕೆ ನನ್ನ ತಂದೆ ಸದರಿ ಮೊತ್ತವನ್ನು ಕೂಡಿಟ್ಟಿದ್ದರು. ನನ್ನ ತಂದೆಯ ಎಲ್ಲ ವ್ಯವಹಾರಗಳು ಅಕೌಂಟ್ ಮೂಲಕವೇ ನಡೆಯುತ್ತಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ.1 ರ ಹಣವನ್ನು ಅವರು ಕೂಡಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ನನ್ನ ತಂದೆ ಸಂಬಳದಿಂದ ವಿತ್ ಡ್ರಾ ಮಾಡಿ ಕೂಡಿಟ್ಟಿದ್ದರು. ನಿಪಿ.14 ರಂತೆ ಎಲ್ಲಿಯೂ ಸಹ ನನ್ನ ತಂದೆ ರೂ.1,90,000/- ಗಳನ್ನು ವಿತ್ ಡ್ರಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಆಗಿದೆ ಎಂದು ಹೇಳುವ ಕಾಲಕ್ಕೆ ನನ್ನ ತಂದೆಯ ಅಕೌಂಟ್ ನಲ್ಲಿ ಅಷ್ಟು ಹಣ ಸಹ ಇರಲಿಲ್ಲ

ಎಂದರೆ ಸರಿಯಲ್ಲ. ನನ್ನ ತಂದೆಯ ಬಳಿ ಅಷ್ಟು ಹಣ ಇರಲಿಲ್ಲ ಮತ್ತು ಪ್ರತಿವಾದಿಗೆ ಹಣ ನೀಡದೇ ಇದ್ದರೂ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆಯ ಮರಣದ ನಂತರ ದಾಖಲಾತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು 1 ನೇ ಪ್ರತಿವಾದಿರವರ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಗೆ ಮಾತ್ರ ಮಂಜೂರಾಗಿತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ದಾವಾ ಆಸ್ತಿಯ ಜಂಟಿ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಕಾನೂನುಬದ್ಧ ಅವಶ್ಯಕತೆಗಳಿಗಾಗಿ ನಾವು ಈ ದಾವೆ ಹೂಡುವ ಮೊದಲೇ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರಿನಂತೆ 2 ನೇ ಪ್ರತಿವಾದಿಗೆ ಶುದ್ಧ ಕ್ರಯ ಪತ್ರ ಮಾಡಿಕೊಟ್ಟು ಸ್ವಾಧೀನ ಸಹ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿರವರು ಎಂದಿಗೂ ಸಹ ನನಗಾಗಲೀ ಅಥವಾ ನನ್ನ ತಂದೆಯವರಿಗಾಗಲೀ ದಾವಾ ಆಸ್ತಿಯನ್ನು ಮಾರುವುದಾಗಿ ಪ್ರಸ್ತಾವನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಹಣ ಸಂದಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಹಣ ಸಂದಾಯ ಆಗಿದ್ದರೆ ಸಾಕ್ಷಿದಾರರು ಷರಾ ಬರೆಯುತ್ತಿದ್ದರು ಆದರೆ ಯಾವುದೇ ಹಣ ಸಂದಾಯವಾಗದ ಕಾರಣ ಷರಾ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ 15 ವರ್ಷ ಪರಬಾರೆ ಅವಧಿಗೆ ಒಳಪಟ್ಟಿದ್ದರಿಂದ 1 ನೇ ಪ್ರತಿವಾದಿ ನಮಗೆ ಯಾವುದೇ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ ದಿನಾಂಕಃ14.02.2020 ರಂದು ನನ್ನ ತಂದೆ ಮರಣದ ನಂತರ ನಾನು ನಿಪಿ.1 ದಾಖಲಾತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ 1 ನೇ ಪುಟ ಮತ್ತು 2 ನೇ ಪುಟ ಬೇರೆ ಬೇರೆಯಾಗಿದ್ದು ಅವುಗಳನ್ನು ಒಂದೇ ದಿನ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹಳೇ ದಿನಾಂಕದ ಸ್ಟಾಂಪ್ ಪೇಪರ್ ನ್ನು ಪಡೆದು 2020 ರಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನಮೂದಿಸಿರುವ 1 ನೇ ಪ್ರತಿವಾದಿ, ಧನಂಜಯ, ರಾಮಣ್ಣ ಮತ್ತು ಕೆ.ವಿ.ನಾಗರಾಜು ಹಾಗೂ ನನ್ನ ತಂದೆ ಕೆಂಪಣ್ಣರವರ ಸಹಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಮತ್ತು ನನ್ನ ಸಹೋದರರು ಸೇರಿಕೊಂಡು ಸುಳ್ಳು ಕತೆ ಸೃಷ್ಟಿಸಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.